ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಅವರು ನನ್ನ ಹತ್ತಿರ ಬರಲಿ, ಅಧಿಕಾರಿಗಳನ್ನೂ ಕರೆಸಿ ವಿಚಾರ ಮಾಡೋಣ.

ಶ್ರೀ ಬಿ. ಲಕ್ಕಪ್ಪ.—ಸೈನ್ಸ್ ಕಾಲೇಜನ್ನು ಓಪನ್ ಮಾಡದೇ ಇರುವುದರಿಂದ ನೂರಾರು ಹುಡುಗರಿಗೆ ಬಹಳ ತೊಂದರೆಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಸೈನ್ಸ್ ಕಾಲೇಜನ್ನು ತಾವು ಪ್ರಾರಂಭ ಮಾಡುತ್ತಿರೊ ಇಲ್ಲವೋ ?

ಶ್ರೀ ಎಂ. ಚಂದ್ರಶೇಖರ್.—ಅದಕ್ಕೆ ಯೂನಿವರ್ಸಿಟಿಯವರು ಪರ್ಮಿಷನ್ ಕೊಡಬೇಕಲ್ಲಾ ?

ಶ್ರೀ ಬಿ. ಲಕ್ಕಪ್ಪ.—ಈ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಯೂನಿವರ್ಸಿಟಿ ಒಪ್ಪಿಗೆ ಕೊಟ್ಟಿದೆ ಹಾಗೂ ಅಫಿಲಿಯೇಷನ್ ಆಗಿದೆ.

ಅಧ್ಯಕ್ಷರು.—ಹೀಗೆ ಇಂಟರ್‌ಫಿಯರೆನ್ಸ್ ಮಾಡುವುದು ಸರಿಯಲ್ಲ. ನೋ. ನೋ.

ಶ್ರೀ ಬಿ. ಲಕ್ಕಪ್ಪ.—ಎಲ್ಲಾ ಕಡೆ ಕಾಲೇಜನ್ನು ಕೊಡಲಾಗಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಾಲೇಜನ್ನು ಕೊಟ್ಟರೆ ಏನಾಗುತ್ತದೆ ?

ಅಧ್ಯಕ್ಷರು.—ಇದರ ಬಗ್ಗೆ ಹಾಫ್ ಎನ ಹವರ್ ಡಿಸ್ಕಷನ್ ಹಾಕಿ. ಈಗ ತಾವು ದಯವಿಟ್ಟು ಕಾಳಿತುಕೊಳ್ಳಿ.

ಶ್ರೀ ಎಂ. ಚಂದ್ರಶೇಖರ್.—ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭ ಮಾಡಲು ನೂರಾರು ಬೇಡಿಕೆಗಳಿದ್ದರೂ, ಚಿಕ್ಕನಾಯಕನ ಹಳ್ಳಿಯಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಆಗಲೇಬೇಕೆಂದು ಈ ವಿಷಯವನ್ನು ಕ್ಯಾಬಿನೆಟ್ ಮುಂದೆ ಇಡಿಸಿ ಅಪ್ರೂವ್ ಮಾಡಿಸಿದ್ದೇವೆ. ಮೊದಲು ಈ ಕಾಲೇಜಿನವರು ವಿಜ್ಞಾನ ವಿಷಯಕ್ಕೆ ಅಫಿಲಿಯೇಷನ್ ತೆಗೆದುಕೊಂಡಿದ್ದರು. ಅದನ್ನು ನಾವು ಆರ್ಟ್ಸ್ ಅಂಡ್ ಕಾಮರ್ಸ್‌ಗೆ ಬದಲಾವಣೆ ಮಾಡಿಸಿದೆವು. ಈಗ ಅದನ್ನು ಬೇಕಾದರೆ ಬದಲಾವಣೆ ಮಾಡಿಸಿಕೊಡೋಣ.

ಶ್ರೀ ಬಿ. ಲಕ್ಕಪ್ಪ.—ಇನ್ನು ಮೂರು ದಿವಸಗಳೊಳಗಾಗಿ ಈ ಕಾಲೇಜನ್ನು ಪ್ರಾರಂಭ ಮಾಡುವ ಬಗ್ಗೆ ತೀರ್ಮಾನ ಮಾಡುತ್ತೇವೆಂದು ಹೇಳುವವರೆಗೂ ನಾನು ಹೀಗೆ ನಿಂತಿರುತ್ತೇನೆ. ಒಂದು ಕಾಲೇಜನ್ನು ಕೊಡುವುದಕ್ಕೆ ೩ ವರ್ಷಗಳು ಬೇಕಾ ?

ಅಧ್ಯಕ್ಷರು.—ಮತ್ತೊಬ್ಬರ ಸಮಯವನ್ನು ತಾವು ಮೊಟಕು ಮಾಡುವುದು ಸರಿಯಲ್ಲ. ತಾವು ಕೂಡ್ರಿ. ಶಿವಣ್ಣನವರೇ ತಾವು ಕೇಳ್ರಿ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ,

ಅಧ್ಯಕ್ಷರು.—ತಾವು ಕೂಡ್ರಿ ಅಂದರೆ ಕೂರಬೇಕು.

ಶ್ರೀ ಬಿ. ಲಕ್ಕಪ್ಪ.—ನಾನು ನಿಂತುಕೊಂಡೇ ಇರುತ್ತೇನೆ.

ಅಧ್ಯಕ್ಷರು.—ಹಾಗೇ ನಿಂತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ದಯವಾಡಿ ತಾವು ಯೂನಿವರ್ಸಿಟಿಯವರಿಗೆ ಹೇಳಿ ಆದಷ್ಟು ಬೇಗ ಸೈನ್ಸ್ ಸಬ್ಜಕ್ಟ್ ಕಾಲೇಜಿಗೆ ಅನುಮತಿಯೆನ್ನು ಕೊಡಿಸಿ.

ಶ್ರೀ ಎಂ. ಚಂದ್ರಶೇಖರ್.—ಯೂನಿವರ್ಸಿಟಿಗಳು ಆಟಾನಮಸ್ ಬಾಡಿಗಳಾಗಿರುತ್ತವೆ. ಅವರಿಗೆ ಈ ಕಾರಿತು ಬದಲಾವಣೆ ಮಾಡುವಂತೆ ತಿಳಿಸಿದ್ದೇವೆ.

ಶ್ರೀ ಎಸ್ ಬಂಗಾರಪ್ಪ.—ಅವರಿಗೆ ದೂರವಾಣಿ ಮುಖಾಂತರ ಬೇಗನೆ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ತಾವುಗಳು ಹೇಳ ಬಹುದಲ್ಲ ?

ಶ್ರೀ ಎಂ. ಚಂದ್ರಶೇಖರ್.—ಆಯಿತು, ಮತ್ತೊಮ್ಮೆ ಈ ಬಗ್ಗೆ ಅವರಿಗೆ ಹೇಳುತ್ತೇನೆ.

ಹೆಚ್. ಡಿ. ಕೋಟೆ ತಾಲ್ಲೂಕಿನ ಸಣ್ಣ ನೀರಾವರಿ ಬಗ್ಗೆ

೯೪೭ (೨೮೪೭) ಶ್ರೀ ಎಂ. ಶಿವಣ್ಣ (ಹೆಚ್.ಡಿ ಕೋಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹೆಚ್. ಡಿ. ಕೋಟೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಯಲ್ಲಿ ಸೇರಿದ ಕಾಮಗಾರಿಗಳೆಷ್ಟು ? (ವಿವರವೊದಗಿಸುವುದು)

ಆ) ೧೯೮೫ ರಿಂದ ಪ್ರತಿ ಕಾಮಗಾರಿಗಳಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ?

ಇ) ಈ ಬಾಬ್ತು ತೆಗೆದುಕೊಂಡ ಕೆಲಸಗಳೆಷ್ಟು ? ಖರ್ಚು ಮಾಡಲಾಗಿರುವ ಹಣ ಎಷ್ಟು ?

ಈ) ಅನೇಕ ಕಾಮಗಾರಿ ಕೆಲಸಗಳಿಗೆ ಸುಳ್ಳು ಬಿಲ್ ಪಾವತಿ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಬಂದಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ೧೯೮೫-೮೬ ——೧
೧೯೮೬-೮೭ ——೩
೧೯೮೭-೮೮ ——೬
೧೯೮೮-೮೯ ——೭

ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಎರಡು ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ೬೧.೯೩ ಲಕ್ಷ ರೂ. ವೆಚ್ಚ ಮಾಡಲಾಗಿದೆ.

ಈ) ಇಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

STATEMENT TO ACCOMPANY REPLIES TO STARRED L. A. QUESTION NO. 2847

LIST OF BUDGETTED WORKS IN H. D. KOTE TALUK
(MINOR IRRIGATION)

Sl. No	Name of work	Estimated cost.	Grant for 85-86	Grant for 1986-87	Grant for 1987-88	Grant for 88-89
1	New tank near Bheemanahally (Under W B A)	49,50,000	36,55,000	50,000	5,00,000	—
2	New Tank near Koihegala	4,51,000	—	10,000	20,000	—
3	-do- Hunaganahaliy	19,50,000	—	90,000	50,000	2,00,000
4	L. S. S. near Chikkanandi	5,00'000	—	—	10,000	—
5	Restoration of breached Karigala tank	60,00,000	—	—	—	20,71,000
6	L. I. S. near Bheeramballi	5,00,000	—	—	10,000	10,000
	Total		36,55,000	1,50,000	5,20,000	20,81,000
7	Doddahalli	5,00,000	—	—	50,000	2,00,000
				Total	50,000	2,00,000

ಶ್ರೀ ಎಂ. ಶಿವಣ್ಣ.—ಸನ್ಮಾನ್ಯ ಅಧ್ಯಕ್ಷರೆ, ೧೯೮೫ನೇ ಸಾಲಿನಿಂದ ೧೯೮೯ನೇ ಸಾಲಿನವರೆಗೆ ಎಷ್ಟು ಹಣಕಾಸನ್ನು ಸಣ್ಣ ನೀರಾವರಿಗಾಗಿ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಉತ್ತರವಾಗಿ ೧೯೮೫ ರಿಂದ ೧೯೮೯ ರವರೆಗೆ ವಿವರವನ್ನು ಪಟ್ಟಿಯಲ್ಲಿ ಕೊಟ್ಟಿದ್ದಾರೆ. ಹೀಗೆ ಕೊಟ್ಟಿರತಕ್ಕಂಥಾದ್ದರಲ್ಲಿ ಯೋಜನೇತರ ಬಾಬಿನಲ್ಲಿ ಸುಮಾರು ಎರಡು ಕಾಮಗಾರಿಗಳಿಗೋಸ್ಕರವಾಗಿ ಹಣವನ್ನು ಕೊಟ್ಟಿದ್ದಾರೆ ಇದರಲ್ಲಿ ಹೆಗ್ಗಡದೇವನ ಕೋಟೆಯ ಕರಿಗಳ ಅಣೆಕಟ್ಟು ಒಡೆದು ಹೋಗಿದ್ದು ಆ ಬಗ್ಗೆ ಕೆಲಸ ಪ್ರಾರಂಭ ಮಾಡಿದ್ದರೂ ಕೂಡ ಮಳೆಯಿಂದಾಗಿ ಹೀಗೆ ಮಾಡಿದ ಕೆಲಸವೂ ಕೂಡ ನಿಷ್ಪ್ರಯೋಜಕವಾಗಿದ್ದು ಈಗ ಪುನಃ ಅಣೆಕಟ್ಟು ಒಡೆದು ಹೋಗಿರುತ್ತದೆ. ಅದು ಮಾನ್ಯ ಸಚಿವರಿಗೂ ಸಹ ತಿಳಿದಿದೆ ಎಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ಅವರು ಮೈಸೂರಿಗೆ ಹೋದಾಗ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಆದುದರಿಂದ ಕೂಡಲೇ ಹೆಚ್ಚಿನ ಹಣಕಾಸನ್ನು ಆ ಕೆಲಸಕ್ಕೆ ಬಿಡುಗಡೆಮಾಡಿ ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯೋಜನೇತರ ಬಾಬಿನಲ್ಲಿ ಅಂದರೆ ಏನು ಕೆರೆಗಳಲ್ಲಿನ ಹೂಳನ್ನು ತೆಗೆಯ ಬೇಕಾಗಿದೆ ಮತ್ತು ಇತರ ಕೆಲಸವನ್ನು ಅಗತ್ಯವಾಗಿ ಮಾಡಬೇಕಾಗಿದೆ ಅದಕ್ಕೆ ಹಣಕಾಸಿಲ್ಲ ಎಂದು ತಡೆಹಾಕಲಾಗಿದೆ ಎಂದು ತಿಳಿದುಕೊಂಡಿದ್ದೇನೆ. ಈಗ ಮಾನ್ಯ ಬೊಮ್ಮಾಯಿ ಯವರು ಸಚಿವ ಸಂಪುಟದಲ್ಲಿ ಮತ್ತೇ ಇವರು ನೀರಾವರಿ ಸಚಿವರಾದ ಮೇಲೆ ಈ ಬಗ್ಗೆ ಹಣಕಾಸಿನ ಲಭ್ಯತೆ ತಮಗೆ ಆಗಿ, ಆ ಕೆಲಸವನ್ನು ಪೂರ್ತಿಮಾಡಿಸಿ ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಎರಡು ಕೆರೆಗಳು ಒಡೆದು ಹೋಗಿವೆ. ಅವುಗಳು ಬಜೆಟ್‌ನಲ್ಲಿ ಇಲ್ಲದಿದ್ದರೂ ಕೂಡ ಆ ಕೆಲಸವನ್ನು ತೆಗೆದುಕೊಳ್ಳಲ್ಲಿಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಏಕೆಂದರೆ ಆ ಕೆರೆಗಳು ಅತ್ಯಂತ ಪ್ರಮುಖ್ಯವಾದ ಕೆರೆಗಳು ಆಗಿವೆ. ನಾನು ಆ ಸ್ಥಳಕ್ಕೆ ಭೇಟಿ ನೀಡಿದಾಗ ಮಾನ್ಯ ಸದಸ್ಯರೂ ಕೂಡ ಬಂದಿದ್ದರು ಅದು ಬಹಳ ಡೇಮೇಜ್ ಆಗಿರುತ್ತದೆ. ಆದನ್ನು ಅವರು ನೋಡಿದ್ದಾರೆ. ಆ ಕೆರೆಯು ಒಡೆದು ಹೋದ ಮೇಲೆ ಆ ಸ್ಥಳಕ್ಕೆ ನಾನು ಹೋಗಿದ್ದೆ. ಅಲ್ಲಿ ಕೆಲಸ ನಡೆಯುತ್ತಾ ಇದೆ. ಮಳೆ ಹೆಚ್ಚಾಗಿ ಆಗಿದ್ದರಿಂದ ಮುಂದೆ ಹಾಕಿದಂಥ ರಿಂಗ್‌ಬಂಡ್‌ಗಳೂ ಕೂಡ ವಾಶ್‌ಔಟ್ ಆಗಿದೆ. ಇದರಲ್ಲಿ ಯಾರ ತಪ್ಪು ಇಲ್ಲಾ. ನಾನು ಎರಡನೆ ಬಾರಿ ಹೋಗಿ ಪರಿಶೀಲನೆ ಮಾಡಿದ್ದೇನೆ. ಆ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ನಮಗೆ ಯಾವ ಹಣದ ಕೊರತೆಯೂ ಇಲ್ಲ. ಆ ಕೆಲಸವನ್ನು ಮಾಡಿ ಮುಗಿಸುತ್ತೇವೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅಲ್ಲಿ ಎರಡೂವರೆ ಸಾವಿರ ಎಕರೆಗಳಷ್ಟು ಜಮೀನು ನೀರಾವರಿ ಆಗತಕ್ಕಂಥಾದ್ದು ಇದೆ, ಅದಕ್ಕೋಸ್ಕರವಾಗಿ ಡೈವರ್ಷಿಯಲ್ ಚಾನಲ್ ಮಾಡಿ ಒಂದು ಭಾಗದ ನಾಲೆಯಲ್ಲಿ ನೀರು ಕೊಡುತ್ತಾ ಇದ್ದೇವೆ. ಅಲ್ಲಿಯ ಜನರು ಬೆಳೆ ಇಟ್ಟಿದ್ದಾರೆ. ಇದಿರ ಕೆಲಸವನ್ನು ಕೂಡ ಈ ಬೇಸಿಗೆಯಲ್ಲಿ ಮಾಡಿ ಮುಗಿಸುತ್ತೇವೆ.

ಅಧ್ಯಕ್ಷರು.—ಈಗ ಶ್ರೀ ಬಿ. ಎ. ಉಮರಬ್ಬರವರ ಪ್ರಶ್ನೆ ಇದೆ. ಆದರೆ ತಮ್ಮ ಪ್ರಶ್ನೆಯು ೫ನೇ ತಾರೀಖಿಗೆ ಮುಂದಕ್ಕೆ ಹಾಕಲಾಗಿದೆ. ಅದು ಬೇರೆ ಡಿಪಾರ್ಟ್‌ಮೆಂಟಿಗೆ ವರ್ಗಾವಣೆ ಆಗಿದೆ

ಶ್ರೀ ಬಿ.ಎ. ಉಮರಬ್ಬ.—ಅಧ್ಯಕ್ಷರೆ, ನಿಮ್ಮ ಈ ವರ್ಗಾವಣೆ ಎಲ್ಲಿಯವರೆಗೆ ಬಂದಿದೆ ಅಂದರೆ, ಪ್ರತಿಯೊಂದೂ ಕೂಡ ವರ್ಗಾವಣೆಯಾಗುತ್ತಾ ಇದೆ. ಅಧಿಕಾರವನ್ನು ಹಳ್ಳಿಗೆ ವರ್ಗಾವಣೆ ಮಾಡಿದ್ದೀರಿ. ಹಾಗೆ ಮಾಡಿದ ಮುಖ್ಯಮಂತ್ರಿಯವರನ್ನು ದಿಲ್ಲಿಗೆ ವರ್ಗಾವಣೆ ಮಾಡಿದ್ದೀರಿ. ಇದ್ದ ಮಂತ್ರಿಗಳನ್ನು ಕುರ್ಚಿಯಿಂದ ಕುರ್ಚಿಗೆ ಮತ್ತು ಬೇರೆ ಕಡೆಗೆ ವರ್ಗಾವಣೆ ಮಾಡಿದ್ದೀರಿ. ಹೀಗೆ, ಎಲ್ಲವೂ ವರ್ಗಾವಣೆ ಆಗುತ್ತಿದೆ.....

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ತಮ್ಮ ಪ್ರಶ್ನೆಗೆ ೫ನೇ ತಾರೀಖಿಗೆ ಉತ್ತರವನ್ನು ಕೊಡುತ್ತಾರೆ.

ಅಧ್ಯಕ್ಷರು.—ದಯವಿಟ್ಟು ಕೂಡ್ರಿ. ನಿಮ್ಮದಕ್ಕೆ ನಾಳೆ ನಾಡಿದ್ದು ಉತ್ತರ ಕೊಡಿಸುತ್ತೇನೆ.

ಶ್ರೀ ಬಿ.ಎ. ಉಮರಬ್ಬ.—ಕನ್ನಡ ಸಮ್ಮೇಳನವನ್ನು ಮ್ಯಾಜಿಸ್ಟೇಟರ್‌ಗೆ ವರ್ಗಾವಣೆ ಮಾಡಿಸುತ್ತೀರಿ.

ಅಧ್ಯಕ್ಷರು.—ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಎಕ್ಸ್‌ಪಂಜ್ಡ್.

ಶ್ರೀ ಬಿ.ಎ. ಉಮರಬ್ಬ.—ನನ್ನ ಪ್ರಶ್ನೆಯನ್ನು ಬೇರೆ ಇಲಾಖೆಗೆ ವರ್ಗಾವಣೆ ಮಾಡಿಸಿ, ಅದಕ್ಕೆ ಉತ್ತರ ಕೊಡುವಾಗ ನನ್ನದೊಂದು ಸಪ್ಲಿಮೆಂಟರಿ ಇದೆ. ಏನೆಂದರೆ, ಈ ಸರ್ಕಾರ ಯಾವಾಗ ವರ್ಗಾವಣೆಯಾಗುತ್ತದೆಂದು ಉತ್ತರ ಹೇಳಿದರೆ ಅಷ್ಟೇ ಸಾಕು.